ಮಾಡಬೇಕಾದ್ದಿಲ್ಲ. ನಮಗೆ ಎಷ್ಟು ಸಾಧ್ಯವೋ ಅಷ್ಟು ಕೆಲಸವನ್ನು ನಾವು ಮಾಡುತ್ತೇವೆ..

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ,....

ಅಧ್ಯಕ್ಷರು:- ಬಂಗಾರಪ್ಪನವರಿಗೆ ಅವಕಾಶ ಮಾಡಿಕೊಡಿ, ಅವರು ಬೆಳಿಗ್ಗೆ ವಿದ್ಯುಚ್ಛಕ್ತಿ ಬಗ್ಗೆ ಮಾತನಾಡಬೇಕೆಂದು ಹೇಳಿದ್ದಾರೆ.

ವಿಷಯ:- ರೈತರ ಪಂಪುಸೆಟ್ಟುಗಳಿಗೆ ವಿದ್ಯುತ್ ಸರಬರಾಜು ಮಾಡುವ ವ್ಯವಸ್ಥೆ:-

ಶ್ರೀ ಎಸ್.ಬಂಗಾರಪ್ಪ(ಸೊರಬ):- ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಅನುಮತಿಯನ್ನು ಪಡೆದು ಒಂದು ಪ್ರಮುಖವಾಗಿರತಕ್ಕಂಥ ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ. ಅಖಿಂಡ ಕರ್ನಾಟಕದಲ್ಲರತಕ್ಕಂಥ ರೈತರ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡತಕ್ಕಂಥ ವ್ಯವಸ್ಥೆ ಮತ್ತು ಅವರ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡತಕ್ಕಂಥ ಸಂದರ್ಭದಲ್ಲಿ ಯಾವ ನಿಲುವನ್ನು ಎಷ್ಟು ವರ್ಷಗಳಿಂದ ನಾವು ಒಂದು ಪ್ರತಿಪಾದನೆ ಮಾಡುತ್ತಾ ಬಂದಿದ್ದೇವೆ; ಈಗಿರತಕ್ಕಂಥ ವ್ಯವಸ್ಥೆ ಏನು ಮತ್ತು ನಾವು ತೆಗೆದುಕೊಳ್ಳತಕ್ಕಂಥ ಕ್ರಮಗಳು ಏನು ಎನ್ನತಕ್ಕಂಥ ವಿಚಾರದಲ್ಲಿ ನಾನು ಪ್ರಮುಖವಾಗಿರತಕ್ಕಂಥ ಎರಡು ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇನೆ. ಮೊದಲನೆಯದು ವಿದ್ಯುಚ್ಛಕ್ತಿ ಉತ್ಪಾದನೆ ಬಗ್ಗೆ ನಾನು ವಿವರಗಳಿಗೆ ಹೋಗುವುದಿಲ್ಲ. ಆ ವಿಚಾರದಲ್ಲಿ ಬಜೆಟ್ ಮೇಲೆ ಮಾತನಾಡಬೇಕಾದರೆ ನಾನು ವಿವರವಾಗಿ ಎಷ್ಟು ಮೇಗಾವೆಟ್ ನಮಗೆ ರಿಕ್ವೈರ್‌ಮೆಂಟ್ ಕರ್ನಾಟಕ ರಾಜ್ಯದಲ್ಲಿದೆ ಮತ್ತು ಎಷ್ಟು ಉತ್ಪಾದನೆ ಮಾಡುತ್ತಿದ್ದೇವೆ, ಎಷ್ಟಕ್ಕೆ ನಾವು ಕೋಜೆಂಟ್ರಿಕ್ಸ್ ಕಂಪನಿ ಇರಬಹುದು ಅಥವಾ ಫಾರಿನ್ ಫೈನಾನ್ಸಿಂಗ್ ಇನ್‌ಸ್ಟ್ಯುಟ್ಯೂಷನ್ಸ್ ಅವರು ಯಾರೇ ಇರಬಹುದು, ಅವು ಎಷ್ಟು ತರುತ್ತೇವೆ ಎನ್ನತಕ್ಕಂಥ ವಿವರವನ್ನು ಆಗ ಮಾತನಾಡುತ್ತೇನೆ. ಆದರೆ ಈಗಿರತಕ್ಕಂಥ ಪರಿಸ್ಥಿತಿಯಲ್ಲಿ ಇವೊತ್ತು ನಾವು ಕರ್ನಾಟಕ ರಾಜ್ಯದಲ್ಲಿ ಉತ್ಪಾದನೆ ಮಾಡತಕ್ಕಂಥ ವಿದ್ಯುಚ್ಛಕ್ತಿ, ಬೇರೆ ಕಡೆಯಿಂದ ಬರತಕ್ಕಂಥ ವಿದ್ಯುಚ್ಛಕ್ತಿ, ಟೋಟಲ್ ಆಗಿ ನಮ್ಮ ಡಿಸ್ಟ್ರಿಬ್ಯೂಷನ್ ಸಿಸ್ಟಂ ಇರತಕ್ಕಂಥದ್ದು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ. ಇವೊತ್ತು ಪವರ್ ಕಾರ್ಪೊರೇಷನ್‌ನಿಂದ ಬರತಕ್ಕಂಥದ್ದು ಮತ್ತು ಬೇರೆಯವರಿಂದ ಒಳಗೊಂಡು ನಾವು ಪ್ರಾಮುಖ್ಯವಾಗಿ ಎರಡು ಮೂರು ಏರಿಯಾಕ್ಕೆ ನಾವು ಸಪ್ಲೈ ಮಾಡುತ್ತಿದ್ದೇವೆ. ಒಂದು, ಕೈಗಾರಿಕಾ ಕ್ಷೇತ್ರ, ಇದು ಬಹಳ ದೊಡ್ಡ ಕ್ಷೇತ್ರ. ಮತ್ತೊಂದು ಕೃಷಿ ಕ್ಷೇತ್ರ. ಇದು ಬಹಳ ಪ್ರಾಮುಖ್ಯವಾದ ಕ್ಷೇತ್ರ. ಏಕೆಂದರೆ ಕೃಷಿ ಆಧಾರಿತ ಆರ್ಥಿಕ ವ್ಯವಸ್ಥೆ ನಮ್ಮಂಥ ರಾಷ್ಟ್ರದಲ್ಲಿರತಕ್ಕಂಥ ಸಂದರ್ಭದಲ್ಲಿ ವಿದ್ಯುಚ್ಛಕ್ತಿಯನ್ನು ಅಳವಡಿಸಿಕೊಂಡು ಉಪಯೋಗ ಮಾಡಿಕೊಳ್ಳತಕ್ಕಂಥದ್ದು. ಹೆಚ್ಚಿನ ಆಹಾರಧಾನ್ಯ ಉತ್ಪಾದನೆ ದೃಷ್ಟಿಯಿಂದ ರಾಜ್ಯತನ್ನ ಮುಖಾಂತರ ಮತ್ತು ರಾಷ್ಟ್ರಕ್ಕೂ ಕೂಡ ಇದು ಕೊಡುಗೆ ಕೊಡತಕ್ಕಂಥ ಸಂದರ್ಭ ಇದೆ. ಇವೊತ್ತು ನಾವು ಒಂದು ವಿಚಾರವನ್ನು ತೆಗೆದುಕೊಂಡಾಗ ನಾವು ಒಂದು ಯೂನಿಟ್ ವಿದ್ಯುಚ್ಛಕ್ತಿಗೆ ಎಷ್ಟು ರೇಟ್ ಹಾಕುತ್ತಿದ್ದೇವೆ ಅಥವಾ ಪುಕ್ಕಟೆಯಾಗಿ ಕೊಡಬೇಕೇ, ಬೇಡವೇ ಎನ್ನತಕ್ಕಂಥ ಪ್ರಶ್ನೆ, ನಾವು ಅಷ್ಟಕ್ಕ ಸೀಮಿತಗೊಂಡು ಈ ವಿಚಾರವನ್ನು ಪ್ರಸ್ತಾಪ ಮಾಡಬಾರದು. ನಮ್ಮ ಮುಂದಿರತಕ್ಕಂಥ ಪ್ರಶ್ನೆ, ಮಾನ್ಯ

ಅಧ್ಯಕ್ಷರೇ, ತಮಗೆ ಗೊತ್ತಿದೆ ಇಡೀ ರಾಷ್ಟ್ರದಲ್ಲಿ ಆಹಾರದ ಉತ್ಪಾದನೆಯನ್ನು ಬರೇ ಭಾರಿ ಭಾರಿ ಜಲ ವಿದ್ಯುತ್ ಯೋಜನೆಗಳನ್ನು ಕಟ್ಟಿ ನಾವು ಮಾಡುವುದಕ್ಕೆ ಆಗುವುದಿಲ್ಲ. ಇವೊತ್ತು ಕರ್ನಾಟಕ ರಾಜ್ಯದಲ್ಲಿ ನಾವು ಲೆಕ್ಕ ಹಾಕಿದರೆ ಸುಮಾರಾಗಿ ಮೂರನೆಯ ಒಂದು ಭಾಗ ನಾವು ದೊಡ್ಡ ದೊಡ್ಡ ಡ್ಯಾಮ್‌ಗಳನ್ನು ಕಟ್ಟಿ ನಾವು ಮತ್ತೊಂದು ನೀರಾವರಿ ಪ್ರದೇಶಕ್ಕೆ ನಾವು ನೀರನ್ನು ಉಳಿಸಿದರೆ ಇನ್ನು ಮೂರನೇ ಎರಡು ಭಾಗದಷ್ಟಕ್ಕೆ ಮಳೆ ನೀರನ ಆಶ್ರಯ, ಅಂತರ್ಜಲವನ್ನು ಆಶ್ರಯಿಸಬೇಕು. ಉದಾಹರಣೆಗೆ ತಮ್ಮ ಕೋಲಾರ ಜಿಲ್ಲೆ ಅಥವಾ ಬೆಂಗಳೂರಿನ ಸುತ್ತ ಮುತ್ತ ಮತ್ತು ಬೀದರ್ ಜಿಲ್ಲೆ. ನಾವು ಅಲ್ಲಿ ಹಳ್ಳಿಖೇಡ್ ಇತ್ಯಾದಿ ಷುಗರ್ ಫ್ಯಾಕ್ಟರಿಗಳಲ್ಲಿ ಬರೇ ಬೋರ್‌ವೆಲ್‌ಗಳಿಂದಲೇ ಉತ್ಪಾದನೆ ಮಾಡುತ್ತಿದ್ದೇವೆ. ಇದೇ ರೀತಿ ಅಖಿಂಡ ಕರ್ನಾಟಕದ 19 ಜಿಲ್ಲೆಗಳಲ್ಲೂ ಕೂಡ ಸಾಕಷ್ಟು ಪ್ರಮಾಣದಲ್ಲಿ ನಾವು ಅಂತರ್ಜಲದ ಮೂಲಕ ನಾವು ಹೆಚ್ಚು ಬೆಳೆಯನ್ನು ತೆಗೆಯತಕ್ಕಂಥ ವ್ಯವಸ್ಥೆಯನ್ನು ನಾವು ಮಾಡಿಕೊಂಡಿದ್ದೇವೆ. ಯಾವ ಬೆಳೆ ಎನ್ನತಕ್ಕಂಥ ವಿವರಗಳಿಗೆ ನಾನು ಹೋಗುವುದಿಲ್ಲ. ಅದು ಕಬ್ಬು ಇರಬಹುದು, ಭತ್ತ ಇರಬಹುದು, ಶೇಂಗಾ ಇರಬಹುದು ಅಥವಾ ರೇಷ್ಮೆ ಇರಬಹುದು ಮತ್ತೊಂದು ಇರಬಹುದು. ಅದಕ್ಕೆ ಸಂಬಂಧಪಟ್ಟ ಯಾವುದೇ ಬೆಳೆ ಇರಬಹುದು. ಇವೊತ್ತು ಪರಿಸ್ಥಿತಿ ಏನಾಗಿದೆ ಎಂದು ಹೇಳಿದರೆ ರೈತರ ಪಂಪುಸೆಟ್ಟುಗಳಿಗೆ ವಿದ್ಯುಚ್ಚಕ್ತಿಯನ್ನು ನಾವು ಸರಬರಾಜು ಮಾಡುವುದಕ್ಕೆ ಆಗಿಲ್ಲ. ನಮ್ಮ ಹತ್ತಿರ ಇರತಕ್ಕಂಥ ಒಟ್ಟು ವಿದ್ಯುಚ್ಚಕ್ತಿ ಉತ್ಪಾದನೆ ಸಾಮರ್ಥ್ಯ ನಮಗಿದೆ, ಅದರಲ್ಲಿ ನಾವು ಸಾಕಷ್ಟು ಪ್ರಮಾಣದಲ್ಲಿ ವಿದ್ಯುತ್ತನ್ನು ಉಪಯೋಗ ಮಾಡತಕ್ಕಂಥ ಕೃಷಿಯೇತರ ವಲಯ ಎಂದು ಹೇಳಿದ ಅದು ಕೈಗಾರಿಕೆ ವಲಯ. ಇನ್ನು ಮನೆಗಳಿಗೆ ಉಪಯೋಗ ಮಾಡತಕ್ಕಂಥದ್ದು ಮತ್ತೊಂದು ವಲಯವೂ ಕೂಡ ಇದೆ. ಮನೆಯ ದೀಪಕ್ಕೋಸ್ಕರ ಅಥವಾ ಇತ್ಯಾದಿಗೋಸ್ಕರ ವಿದ್ಯುಚ್ಚಕ್ತಿಯನ್ನು ಉಪಯೋಗ ಮಾಡುತ್ತೇವೆ. ಇವೊತ್ತು ಏನಾಗಿದೆ ಎಂದು ಹೇಳಿದ ನಾವು ಇವೊತ್ತು ಫ್ಯಾಕ್ಟರಿಗಳಿಗೆ ಮತ್ತು ಮತ್ತೊಂದಕ್ಕೆ ನಾವು ವಿದ್ಯುಚ್ಚಕ್ತಿಯನ್ನು ಸರಬರಾಜು ಮಾಡಿದರೆ ಅಲ್ಲಿಂದ ಉತ್ಪಾದನೆಯಾಗತಕ್ಕಂಥ ಯಾವುದೇ ರೀತಿಯ ವಸ್ತು ಇರಬಹುದು, ಅಬರಿಂದ ನಮಗೆ ಅದರ ಮೇಲೆ ಡೈರೆಕ್ಟ್ ಆಗಿ ಉತ್ಪಾದನೆ ಸಿಗುತ್ತದೆ ಎನ್ನತಕ್ಕಂಥ ಒಂದು ಕಲ್ಪನೆ; ಅದು ನಿಜ. ಉದಾಹರಣೆಗೆ ಫ್ಯಾಕ್ಟರಿಯಿಂದ ಹೊರಗಡೆ ಬರತಕ್ಕಂಥ ಒಂದು ವಸ್ತು ಅಲ್ಲಿದ್ದರೆ ಅದನ್ನು ಸೇಲ್ ಟ್ಯಾಕ್ಸ್ ಮತ್ತೊಂದು ಇತ್ಯಾದಿ ಇತ್ಯಾದಿ ನಾವು ಕರವನ್ನು ಕಲೆಕ್ಷನ್ ಮಾಡುತ್ತಾ ಹೋಗುತ್ತೇವೆ. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದವರೂ ಮಾಡುತ್ತಾರೆ. ಆದರೆ ಇವೊತ್ತು ಕೃಷಿಯೇತರ ಉತ್ಪಾದನೆಗೆ ಒಂದು ಗಮನವನ್ನು ನಾವು ಆ ರೀತಿ ಕೊಟ್ಟಿದ್ದರೆ ಕೃಷಿಗೆ ನಾವು ಸೀಮಿತಗೊಳಿಸಿ ನಾವು ಮಾತನಾಡುವ ಹಾಗೆ ಇದ್ದರೆ ನಾವು ಕೃಷಿ ಆಧಾರಿತ ಆರ್ಥಿಕ ವ್ಯವಸ್ಥೆಗೆ ಗಮನವನ್ನು ಕೊಡಬೇಕು. ಅದನ್ನೇ ಶ್ರೀಮಾನ್ ಪುಟ್ಟಣ್ಣಯ್ಯ ಅವರು ಹೇಳಿದ್ದುದು. ನಾನು ಸಹ ರೈತನ ಮೇಲೆ ನಂಬಿಕೆ ಇರತಕ್ಕಂಥವನು, ರೈತನ ಉತ್ಪಾದನೆಗೆ ನಾವು ಹೆಚ್ಚಿನ ಗಮನವನ್ನು ಕೊಟ್ಟುಕೊಂಡು ಹೋಗಬೇಕಾಗಿದೆ. ಅದಕ್ಕಾಗಿ ನಾವು ಅವರಿಗೆ ಸಾಲ ಸೌಲಭ್ಯ ಕೊಡೋಣ. ಅವರಿಗೆ ಕನ್ಸೇಷನ್ ಕೊಡೋಣ, ಸಾಲ ವಜಾ ಮಾಡೋಣ; ಬಡ್ಡಿ ಸುಸ್ತಿ ಬಡ್ಡಿ ಮನ್ನಾ ಇತ್ಯಾದಿ ಬಗ್ಗೆ ನಾವು ಮಾತನಾಡುತ್ತಾ ಹೋಗುತ್ತೇವೆ. ಕರ್ನಾಟಕ ರಾಜ್ಯ ನನಗೆ ಗೊತ್ತಿರುವ ಹಾಗೆ

ನಾನು ಮುಖ್ಯ ಮಂತ್ರಿ ಇದ್ದಂಥ ಕಾಲದಲ್ಲಿ ಸುಮಾರು 9 ಲಕ್ಷ ಚಿಲ್ಲರೆ ರೈತರ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಕೊಟ್ಟಿದ್ದೆವು. ಹೈಯಸ್ಟ್ ನನಗೆ ಗೊತ್ತಿರುವ ಹಾಗೆ ತುಮ್ಕೂರು, ಕೋಲಾರ ಜಿಲ್ಲೆ, ಬೀದರ್, ಬೆಂಗಳೂರು ಸುತ್ತಮುತ್ತಲೂ ಜಿಲ್ಲೆಗಳು ಇತ್ಯಾದಿ. ಆದರೆ ಈಗ ಎಲ್ಲಾ ತಾಲ್ಲೂಕುಗಳಲ್ಲಿಯೂ ಇದೆ. ನನ್ನ ಕಾಲದಲ್ಲಿ ಈ ಮೂರು ಕಂಬಗಳವರೆಗೆ ಮಾತ್ರ ಕನೆಕ್ಷನ್ ಕೊಡಬೇಕು ಎಂದು ಕಾನೂನು ಇತ್ತು. ಅದನ್ನು ನಾನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಹೇಳಿ ಬದಲಾವಣೆ ಮಾಡಿಸಿದೆ. ತೆಗೆದುಕೊಂಡು ಹೋಗಿ, ಅದು ಐದು ಇರಬಹುದು, ಆರು ಇರಬಹುದು, ಏಳು ಇರಬಹುದು ಅಥವಾ ಎಂಟು ಇರಬಹುದು ಕನೆಕ್ಷನ್ ಕೊಡಿ ಏಕೆಂದರೆ ಅವನು ಪಿ.ಎಲ್.ಡಿ.ಯಿಂದ ಬ್ಯಾಂಕ್‌ನಿಂದ ಸಾಲ ತಂದಿರುತ್ತಾನೆ, ಅವನಿಗೆ ಕನೆಕ್ಷನ್ ಕೊಡದೇ ಇದ್ದರೆ ಬಡ್ಡಿ ಬೆಳೆಯುತ್ತಿರುತ್ತದೆ. ಆಗ ಅವನ ಗತಿ ಏನಾಗುತ್ತದೆ. ಮೊದಲು ನಾವು ಇರತಕ್ಕಂಥ ವಿದ್ಯುಚ್ಛಕ್ತಿಯನ್ನು ರೈತರಿಗೆ ಕೊಡೋಣ, ಬಡ್ಡಿಯನ್ನು ಅವನು ಬೆಳೆದಾಗ ನೋಡಿಕೊಳ್ಳೋಣ. ಉತ್ಪಾದನೆ ತೆಗೆಯಲಿ ಎಂದು ಹೇಳಿ ಆ ಕಾನೂನನ್ನು ಬದಲಾವಣೆ ಮಾಡಿಸಿದೆ. ಅದು ಬರೀ ಅವನ ವೈಯುಕ್ತಿಕ ಉತ್ಪಾದನೆಯಾಗುವುದಿಲ್ಲ ಮಾನ್ಯ ಸಭಾಧ್ಯಕ್ಷರೇ, ಅದು ತಮಗೆಲ್ಲಾ ಗೊತ್ತಿದೆ. ಅದು ಅವನ ಮುಖಾಂತರ ರಾಜ್ಯದ ರಾಷ್ಟ್ರದ ಉತ್ಪಾದನೆಗೆ ಸಹಕಾರಿಯಾಗಿರುತ್ತದೆ. On the food front at the national level ultimately ಈ ಒಂದು ದೃಷ್ಟಿಯಿಂದ ನಾವು ವಿಚಾರ ಮಾಡಿ ವಿದ್ಯುಚ್ಛಕ್ತಿಯನ್ನು ನಾವು ಪುಕ್ಕಟೆ ಕೊಡಬೇಕೇ, ಅರ್ಧ ಛಾರ್ಜ್‌ಗೆ ಕೊಡಬೇಕೆ ಅಥವಾ ಹಾರ್ಸ್ ಪವರ್‌ಗೆ ರೇಟ್ ಫಿಕ್ಸ್ ಮಾಡಿ ಕೊಡಬೇಕೆ these are the matters that have been actually worked out by several governments. ನಾನು ಮುಖ್ಯ ಮಂತ್ರಿಯಾಗಿದ್ದಂಥ ಕಾಲದಲ್ಲಿ ದೆಹಲಿಯಲ್ಲಿ ನಡೆದ ಮುಖ್ಯ ಮಂತ್ರಿಗಳ ಸಭೆಯಲ್ಲಿ ಆ ವಿಚಾರ ಬಂದಾಗ ನಾನು ಒಂದು ವಾದವನ್ನು ಮಂಡಿಸಿದೆ. ನಾನು ಏನು ಹೇಳಿದೆನೆಂದರೆ, ಈಗ ನಾವು ಪುಕ್ಕಟೆಯಾಗಿ ವಿದ್ಯುತ್ ಕೊಡಬಾರದು. because the World Bank is coming in the way ಎನ್ನುತಕ್ಕ ಅಭಿಪ್ರಾಯವಿಟ್ಟುಕೊಂಡು ಮಾತನಾಡುವುದಕ್ಕೆ ಹೋಗಬಾರದೆಂದು ಇವೊತ್ತು ಅಮೆರಿಕಾ, ಜಪಾನ್ ಅಥವಾ ಹಲವಾರು ಐರೋಪ್ಯ ರಾಷ್ಟ್ರಗಳಿಗೆ ನಮ್ಮ ದೇಶದ ಆರ್ಥಿಕ ವ್ಯವಸ್ಥೆಯನ್ನು ಹೋಲಿಕೆ ಮಾಡುವುದಕ್ಕೆ ಹೋಗಬಾರದು. We stand on a different footing altogether. ಈಗ ನಾವು ಸಾಧ್ಯವಾದಷ್ಟು ರಿಯಾಯಿತಿಯನ್ನು ಒಂದು ಹಂತದವರೆಗೆ ಕೆಲವು ವರ್ಷಗಳವರೆಗೆ ಕೊಡೋಣ. ಆನಂತರ ಆತ ಒಂದು ಹಂತ ತಲುಪಿದ ಮೇಲೆ we will start getting some money back ಎಂದು ನಾನು ಹೇಳಿದೆ.

ಅಧ್ಯಕ್ಷರು:- ನನ್ನದೊಂದು ವಿನಂತಿ. ಏನೆಂದರೆ ಮಾನ್ಯ ಉಪ ಮುಖ್ಯಮಂತ್ರಿಗಳು, ಇಂಧನ ಖಾತೆಯ ಆಡಳಿತವನ್ನು ನಿರ್ವಹಣೆ ಹೊತ್ತಿರತಕ್ಕಂಥವರು ಈ ದಿವಸ ನನಗೆ ಸದನದಲ್ಲಿ ಹಾಜರಿರುವುದಕ್ಕೆ ಆಗುವುದಿಲ್ಲವೆಂದು ತಿಳಿಸಿದ್ದಾರೆ. ಸದನದ ಎಲ್ಲಾ ಕಡೆಯಿಂದ ಸದಸ್ಯರಿಗೆ ಈ ವಿಚಾರದಲ್ಲಿ ಚರ್ಚೆ ಮಾಡುವ ಒಂದು ಆಸಕ್ತಿ ಇದೆ.

ತಾವು ಬಹಳ ಪ್ರಮುಖವಾದ ವಿಷಯವನ್ನು ಪ್ರಸ್ತಾಪಿಸಿದ್ದೀರಿ. ಅವರು ಸದನದಲ್ಲಿದ್ದಾಗ ನಾವು ಇದನ್ನು ಪ್ರತ್ಯೇಕವಾಗಿ ಸ್ವಲ್ಪ ಸಮಯ ನಿಗದಿಪಡಿಸಿಕೊಂಡು ಸಭಾ ನಾಯಕರನ್ನು, ಉಪ ಮುಖಂಡರನ್ನು ಮತ್ತು ಈ ಕಡೆಯ ವಿರೋಧ ಪಕ್ಷದ ಎಲ್ಲಾ ಮುಖಂಡರುಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಯಾವ ರೀತಿ ನಮ್ಮ ಸಮಯವನ್ನು ಸದನದಲ್ಲಿ ಗೊತ್ತುಪಡಿಸಿಕೊಳ್ಳಬೇಕೆನ್ನುವುದನ್ನು ಮಾಡಿದರೆ ಇನ್ನೂ ಯಶಸ್ವಿಯಾಗಿ ಚರ್ಚೆ ಮಾಡಬಹುದೆನ್ನುವುದು ನನ್ನ ಸಲಹೆ. ಏಕೆಂದರೆ, ತಾವು ಪ್ರಸ್ತಾಪಿಸಬೇಕು ಎಂದು ಹೇಳಿದ್ದರಿಂದ ತಮಗೆ ಅವಕಾಶ ಕೊಟ್ಟೆ. ಚರ್ಚೆ ಮಾಡಿ ಉತ್ತರಕ್ಕೆ ಅವರು ತಯಾರಿಲ್ಲದಿರುವುದರಿಂದ ಸಮಯ ವ್ಯವವಾಗುವುದು ಬೇಡವೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಸ್.ಬಂಗಾರಪ್ಪ:- ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಅಭಿಪ್ರಾಯವನ್ನು ಅನುಮೋದಿಸುತ್ತೇನೆ, ಮತ್ತು ಒಪ್ಪುತ್ತೇನೆ. ಏತಕ್ಕೆಂದರೆ, ಇದು ಬರೀ ಒಂದು ಪಕ್ಷದ, ಒಬ್ಬ ವ್ಯಕ್ತಿಯ ವಿಚಾರವಲ್ಲ. ಒಂದು ಕಡೆ ಭತ್ತ ಬಣಗುತ್ತಿದೆ. ಮತ್ತೊಂದು ಕಡೆ ಶೇಂಗಾ, ರೇಷ್ಮೆ ಹಾಳಾಗುತ್ತಿದೆ. ಅನೇಕ ದೂರುಗಳು ಬರುತ್ತಿವೆ. ನನ್ನ ಹತ್ತಿರ ಜನರ ನಿಯೋಗ ಕೂಡ ಬಂದಿತ್ತು. ಅದಕ್ಕೆ ನಾನು ಮತ್ತು ನನ್ನ ಪಕ್ಷದ ಮಾನ್ಯ ಸದಸ್ಯರುಗಳು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆವೆ. ಇದನ್ನು ಕೇವಲ ಪಕ್ಷದ ವಿಚಾರವೆಂದು ಸೀಮಿತಗೊಳಿಸದೆ ತಾವು ಅದನ್ನು ದೊಡ್ಡ ಪ್ರಮಾಣದಲ್ಲಿ ಚರ್ಚೆಗೊಳಪಡಿಸಬೇಕೆಂಬ ವಿಚಾರವನ್ನು ನಾನು ಒಪ್ಪುತ್ತೇನೆ. ತಾವು ಚರ್ಚೆಗೆ ಅದಷ್ಟು ಶೀಘ್ರವಾಗಿ ಅವಕಾಶ ಮಾಡಿಕೊಡಬೇಕು. ಏಕೆಂದರೆ, ತಡ ಮಾಡಿದರೆ ಬಹಳ ಪ್ರಮಾಣದಲ್ಲಿ ಬಿಗಡಾಯಿಸತಕ್ಕಂಥ ಪರಿಸ್ಥಿತಿ ಬರಬಹುದು.

ಅಧ್ಯಕ್ಷರು:- ಖಂಡಿತ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅತಿ ಶೀಘ್ರವಾಗಿ ಮಾಡುತ್ತೇನೆ.

ಶ್ರೀ ಎಸ್.ಬಂಗಾರಪ್ಪ:- ಸೋಮವಾರ ಅಥವಾ ಮಂಗಳವಾರ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ರೈತರಿಗೆ ಬಹಳ ಒಳ್ಳೆಯದಾಗುತ್ತದೆ ಎನ್ನತಕ್ಕಂಥಾದ್ದು ನನ್ನ ಅಭಿಪ್ರಾಯ. ನಾನು ತಮ್ಮ ಅಭಿಪ್ರಾಯವನ್ನು ಅನುಮೋದಿಸುತ್ತೇನೆ. ನಾನು ಅಂಕಿ-ಅಂಶಗಳನ್ನು ಕೊಟ್ಟು, ಎಷ್ಟು ಪಂಪುಸೆಟ್ಟುಗಳಿವೆ? ಎಷ್ಟು ವಿದ್ಯುತ್ ನಮಗೆ ಖರ್ಚಾಗುತ್ತದೆ? ರೇಟನ್ನು ಫ್ರಿಯಾಗಿ ಬಿಡಬೇಕೆ ಬೇಡವೇ? ನಮ್ಮ ಪಕ್ಷದ ವಿಚಾರ ಅಥವಾ ನನ್ನ ವಿಚಾರ, ಯಾವುದೇ ಇರಬಹುದು. ನಾನು ಮುಖ್ಯ ಮಂತ್ರಿಯಾಗಿದ್ದಾಗಲೇ ಇಡೀ ಭಾರತ ದೇಶದಲ್ಲಿ ಉಚಿತವಾಗಿ ಒಬ್ಬ ರೈತನಿಗೆ ವಿದ್ಯುತ್ ಸೌಲಭ್ಯ ಕೊಡದಿರತಕ್ಕ ಸಂದರ್ಭದಲ್ಲಿ ನಾವು ಉಚಿತವಾಗಿ ಕೊಡಬೇಕೆಂಬ ತೀರ್ಮಾನ ಕೈಗೊಂಡಿದ್ದೆವು. ಇದು ಹೊಗಳಿಕೆಯ ಪ್ರಶ್ನೆಯಲ್ಲ. I am committed to that class of farming community of this Society...

10 ಹೆಚ್.ಪಿ. ವರೆಗೆ ಉಚಿತವಾಗಿ ವಿದ್ಯುತ್ ಕೂಡಬೇಕೆನ್ನುವ ತೀರ್ಮಾನವನ್ನು

ನಾವು ಮಾಡಿದ್ದೆವು. ಇದರಿಂದ ರೈತರಿಗೂ ಸಂತೋಷವಾಗಿತ್ತು. ಅದನ್ನು ಮುಂದುವರೆಸಬೇಕೆನ್ನುವ ಅಭಿಪ್ರಾಯವನ್ನಿಟ್ಟುಕೊಂಡು ಹಾಗೂ ಅಂಕಿ-ಅಂಶಗಳನ್ನಿಟ್ಟು ಮಾತನಾಡುವವನಿದ್ದೇನೆ. ತಾವು ಅನುಮತಿ ಕೊಟ್ಟಾಗ ಚರ್ಚೆ ಪ್ರಾರಂಭಿಸೋಣ.

ಅಧ್ಯಕ್ಷರು:- ವಾಟಾಳ್‌ರವರೇ, ತಾವು ಸ್ವಲ್ಪ ಸಹಕರಿಸಬೇಕು. ನಮ್ಮ ತಿಪಟೂರಿನ ಶಾಸಕರಾದ ನಂಜಾಮರಿಯವರು 5-6 ದಿವಸಗಳಿಂದ ನನ್ನ ಹತ್ತಿರ ಬಂದು ಕೊಬ್ಬರಿ ಬೆಳೆಗಾರರಿಗೆ ಹಾಗೂ ವರ್ತಕರಿಗೆ ತೊಂದರೆಯಾಗಿದೆಯೆಂದು ಹೇಳುತ್ತಿದ್ದರು. ತಾವು ಹಾಗೂ ನಂಜೇಗೌಡರು ಒಳಗೊಂಡಂತೆ ಎಲ್ಲರೂ ಅವರ ಪರವಾಗಿ ವಕಾಲತ್ತು ವಹಿಸಲು ಒಪ್ಪಿಕೊಂಡಿದ್ದೀರಿ. ಮಾನ್ಯ ನಂಜಾಮರಿರವರು ಇದರ ಬಗ್ಗೆ ಓದಬೇಕಾಗಿಲ್ಲ. ಹಾಗೆಯೇ ಹೇಳಿ.

ವಿಷಯ:- ತಿಪಟೂರಿನಲ್ಲಿ ಕೊಬ್ಬರಿ ವರ್ತಕರು ಅನಿರ್ದಿಷ್ಟ ಕಾಲದವರೆಗೆ ವ್ಯಾಪಾರವನ್ನು ನಿಲ್ಲಿಸಿರುವ ಬಗ್ಗೆ. ------

ಶ್ರೀ ಬಿ.ನಂಜಾಮರಿ(ತಿಪಟೂರು):- ಮಾನ್ಯ ಅಧ್ಯಕ್ಷರೇ, ದಿನಾಂಕ 18. 3. 1995ರಂದು ತಿಪಟೂರಿನಲ್ಲಿ ಕೊಬ್ಬರಿ ವರ್ತಕರು ತಮ್ಮ ವ್ಯಾಪಾರವನ್ನು ಅನಿರ್ದಿಷ್ಟ ಕಾಲದವರೆಗೆ ನಿಲ್ಲಿಸಿದ್ದಾರೆ. ಏಕೆಂದರೆ, 1990ರವರೆಗೆ ಸದರಿ ವರ್ತಕರು ಸಿಪಾರಂ ಕೊಡುತ್ತಿದ್ದರು. ಘನ ಸರ್ಕಾರ ವರ್ತಕರ ಮನವಿಯನ್ನು ಸ್ವೀಕರಿಸಿ; ದಿನಾಂಕ 2. 1. 1990 ರಿಂದ ಸಿ ಫಾರಂ ಅನ್ನು ವಜಾಗೊಳಿಸಿತ್ತು. ಆಗಿನಿಂದ ಸಿ ಫಾರಂ ಅನ್ನು ಕೊಡುತ್ತಿರಲಿಲ್ಲ. 1992ನೇ ಏಪ್ರಿಲ್ 1 ರಿಂದ ಶೇಕಡ 4ರಷ್ಟು ತೆರಿಗೆ ಕಟ್ಟುತ್ತಿದ್ದಾಗ ಶೇಕಡ 1 ರಷ್ಟು ತೆರಿಗೆ ಕಡಿಮೆ ಮಾಡಲಾಗಿತ್ತು. ಅದುವರೆಗೆ ಸಿ ಫಾರಂ ತೆಗೆದುಕೊಳ್ಳುತ್ತಿರಲಿಲ್ಲ. ಈಗ ಅಧಿಕಾರಿಗಳು 1992-93ನೇ ಸಾಲಿನ ಲೆಕ್ಕ ಪತ್ರಗಳನ್ನು ತರಿಸಿಕೊಂಡು ಅಸೆಸ್‌ಮೆಂಟ್ ಮಾಡಿದ್ದಾರೆ. ಈಗ ಆ ಅಧಿಕಾರಿಗಳು ಸಿ ಫಾರಂ ಕೊಡಿ ಇಲ್ಲವಾದರೆ ಶೇಕಡ 1 ರಷ್ಟು ತೆರಿಗೆ ಕಟ್ಟಬೇಕೆಂದು ನೋಟೀಸ್ ಜಾರಿ ಮಾಡಿದ್ದಾರೆ. ಇದರಿಂದ ವರ್ತಕರು ಕಳೆದ ಎಂಟು ದಿವಸಗಳಿಂದ ಅನಿರ್ದಿಷ್ಟ ಕಾಲದವರೆಗೆ ತಮ್ಮ ಕೊಬ್ಬರಿ ವಹಿವಾಟನ್ನು ನಿಲ್ಲಿಸಿದ್ದಾರೆ.

ಅಧ್ಯಕ್ಷರು:- ಕೊಬ್ಬರಿ ವಹಿವಾಟು ನಿಂತು ಹೋಗಿದೆ. ಯುಗಾದಿ ಹಬ್ಬ ಹತ್ತಿರ ಬರುತ್ತಿದೆ, ತೊಂದರೆಯಾಗುತ್ತಿದೆ ಎಂಬುದು ತಮ್ಮ ವಿಚಾರ. ಚಿಕ್ಕಮಗಳೂರು, ಹಾಸನ, ತುಮಕೂರು ಎಲ್ಲರೂ ಕೊಬ್ಬರಿಯವರೇ ತಾನೇ, ದಯಮಾಡಿ ಕುಳಿತುಕೊಳ್ಳಿ. ವಾಟಾಳ್ ನಾಗರಾಜ್‌ರವರೇ, ಚಾಮರಾಜನಗರದಲ್ಲೂ ಕೊಬ್ಬರಿ ಬೆಳೆಯುತ್ತೀರಾ? ಅಲ್ಲಿ ಕೊಬ್ಬರಿ ಇಲ್ಲದೆ ಹೋದರೆ ನಿಮಗೆ ಅವರ ಬಗ್ಗೆ ಎಷ್ಟು ಆಸಕ್ತಿ ಇದೆಯೆಂಬುದನ್ನು ಎಲ್ಲರಿಗೂ ಗೊತ್ತಾಗಲಿ ಎಂದು ನಾನು ಹೇಳಿದೆ. ನಿಮ್ಮೆಲ್ಲರ ಪರವಾಗಿ ವಾಟಾಳ್ ನಾಗರಾಜ್‌ರವರು ಮಾತನಾಡುತ್ತಾರೆ. ಜಯಚಂದ್ರರವರೇ, ಶಿವರಾಮುರವರೇ, ಶಿವನಂಜಪ್ಪನವರೇ, ತಾವುಗಳು ದಯಮಾಡಿ ಕುಳಿತುಕೊಳ್ಳಿ ಅವಕಾಶ ಕೊಡುತ್ತೇನೆ. ಮಾನ್ಯ ಸದಸ್ಯರಾದ